**ದಿನಾಂಕ 04-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ-**

1. 4 ನೇ ಪ್ರತಿವಾದಿ ನನ್ನ ಸ್ವಂತ ತಮ್ಮ. ಸದರಿ ವಿಷಯವನ್ನು ನನ್ನ ಮು. ವಿ. ಪ್ರ. ಪತ್ರದಲ್ಲಿ ಹೇಳಿರುತ್ತೇನೆ. ನಾವು 3-4 ವರ್ಷಗಳಿಂದ ಬೇರೆ ಬೇರೆ ವಾಸಿಸುತ್ತಿದ್ದೇವೆ. ನೀವು ಸದರಿ ವಿಷಯವನ್ನು ನೀವು ಮು. ವಿ. ಪ್ರ. ಪತ್ರದಲ್ಲಿ ಹೇಳಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ನನ್ನದು ಅಲ್ಲಿ ಹೊಲ ಇರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ.325 ರೌವುಡಕುಂದಾ ಗ್ರಾಮದಲ್ಲಿ ನನ್ನದು ಯಾವುದೇ ಹೊಲ ಇರುವುದಿಲ್ಲ.

3. ನನ್ನ ತಮ್ಮ ನ್ಯಾಯಾಲಯಕ್ಕೆ ಕೊಟ್ಟಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತು.

4. ನಿಮ್ಮ ಸಹೋದರ ನ್ಯಾಯಾಲಯಕ್ಕೆ ಕೊಟ್ಟಿರುವ ಪಹಣಿಯಲ್ಲಿ ಸರ್ವೆ ನಂ.325/1/6 ರಲ್ಲಿ ವಾದಿಗೆ ಸಂಬಂಧಿಸಿದ 1 ಎಕರೆ ಜಮೀನು ಇದೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. 1 ನೇ ಪ್ರತಿವಾದಿಯದ್ದೂ ಸಹ ಸದರಿ ಸರ್ವೆ ನಂಬರ್‌ನಲ್ಲಿ ಆಸ್ತಿ ಇದೆ. ನೀವು ಇದೆ & ಇರಬಹುದು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು 4 ನೇ ಪ್ರತಿವಾದಿ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿರುತ್ತಾರೆ. ನಿಡಿ-4 ರಲ್ಲಿ ವಾದಿ & 4 ನೇ ಪ್ರತಿವಾದಿಯ ಹೆಸರಿನಲ್ಲಿ ಆಸ್ತಿ ಇದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ.

5. ಆಸ್ತಿ ನಮ್ಮದು ಎಂದು ತೋರಿಸಲು ಪಹಣಿ ಸಾಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಜಮೀನು ಸದರಿ ಸರ್ವೆ ನಂಬರ್‌ನಲ್ಲಿ ಇರಬಹುದು, ಆದರೆ ನಮ್ಮದು ಇದೆ, ಅವರುಗಳು ಆಸ್ತಿಗಳನ್ನು ಆಗಲೇ ಮಾರಿಕೊಂಡು ಹೋಗಿದ್ದಾರೆ ಎನ್ನುತ್ತಾರೆ.

6. ದಾವಾ ಆಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಾವಾ ಆಸ್ತಿಯಲ್ಲಿ ವಾದಿಯ ಆಸ್ತಿ ಇದೆ ಎಂದು ದಾವೆ ಹಾಕಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಆಸ್ತಿ ಇದೆ ಎನ್ನುತ್ತಾರೆ.

7. ನೀವು ಪ್ರತಿವಾದಿಯ ಬೆಂಬಲಿಗರಿದ್ದು, ನಿಮಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವ ವ್ಯಕ್ತಿ ಸ್ವಾಧೀನದಲ್ಲಿರುತ್ತಾನೆ, ಆತನ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಡಿಡಬ್ಲೂ: 3

ಅಸಲು ದಾವೆ ನಂ.274/2023

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.